

# ಕುಳ್ಳ- ದೈತ್ಯರ ಭೇಟಿ

ಇದು ಎರಡು ಅತಿರೇಕಗಳ ಅಪರೂಪದ ಸಂಗಮ. ಟೈನಿ ಅಯರ್ನ್ ಎಂಬ ದೈತ್ಯದೇಹಿಯೊಂದಿಗೆ ಖಗೇಂದ್ರ ಥಾಪಾ ಮಗರ ಎಂಬ ವಿಶ್ವದ ಅತ್ಯಂತ ಗಿಡ್ಡ ವ್ಯಕ್ತಿ ಇಲ್ಲಿದ್ದಾನೆ. ಟೈನಿಯ ಮುಂಗೈ ಉದ್ದ 24 ಅಂಗುಲ. ಅದು ಖಗೇಂದ್ರನ ಇಡೀ ದೇಹದ ಎತ್ತರಕ್ಕಿಂತಲೂ 2 ಅಂಗುಲ ಕಡಿಮೆ. ಅಂದರೆ ಅವನ ಎತ್ತರ ಕೇವಲ 22 ಅಂಗುಲ! ಟೈನಿಯ ತೂಕ 280 ಪೌಂಡ್ (127 ಕಿಲೋ). ಖಗೇಂದ್ರನದ್ದು ಕೇವಲ 10 ಪೌಂಡ್– 4 ಕಿಲೋ 536 ಗ್ರಾಮ್!

28ರ ಹರೆಯದ ಟೈನಿ, ಬ್ರಿಟನ್ನಿನಲ್ಲಿ ಅತಿ ಉದ್ದದ ಮುಂಗೈ ಉಳ್ಳವ ಎಂಬ ಖ್ಯಾತಿ ಪಡೆದಿದ್ದರೆ; ಖಗೇಂದ್ರನದು ಜಾಗತಿಕ ಕೀರ್ತಿ. ವಿಶ್ವದ ಹದಿ ಹರೆಯದವರಲ್ಲಿ ಆತ ಅತ್ಯಂತ ಗಿಡ್ಡ ವ್ಯಕ್ತಿ ಈತ. ಖಗೇಂದ್ರ ಇದೇ ಅಕ್ಟೋಬರ್ 14ರಂದು 18 ವರ್ಷದ ಯುವಕನಾಗುತ್ತಾನೆ. ಆ ಮೂಲಕ ಆತ ಇನ್ನೊಂದು ದಾಖಲೆ ಸ್ಥಾಪಿಸಲಿದ್ದಾನೆ. ಈವರೆಗೆ ವಯಸ್ಕರಲ್ಲಿ ಅತ್ಯಂತ ಗಿಡ್ಡನಾದ, 27 ಅಂಗುಲ ಎತ್ತರದ, 24ರ ಹರೆಯದ, ಕೋಲಂಬಿಯಾದ ನರ್ತಕ ಎಡ್ವರ್ಡ್ ನಿನೊ ಹೆರ್ನಾಂಡೇಜ್‌ನನ್ನು ಆ ಪಟ್ಟದಿಂದ ಕೆಳಗಿಳಿಸಿ, ವಿಶ್ವದ ಗಿಡ್ಡರ ಲೋಕದ ಸಾಮ್ರಾಟನಾಗಲಿದ್ದಾನೆ. ಅಂದ ಹಾಗೆ ಖಗೇಂದ್ರ ನಮ್ಮ ನೆರೆಯ ನೇಪಾಳದವನು.

■ ಸುಭಾಸ ಯಾದವಾಡ




PA

